“ಸಂವಿಧಾನ_ದಿನಾಚರಣೆ”

ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

**ಮೈಸೂರು ವಿಶ್ವವಿದ್ಯಾನಿಲಯ**

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

Mysore University School of Engineering
Reg No. 313
Date 24/11/25
Manasagangotri, Mysuru-06

ಸಂಖ್ಯೆ:ಜಿಎಲ್13/107(ಎ)2022–23 ದಿನಾಂಕ.21–11–2025

**ಸುತ್ತೋಲೆ**

ವಿಷಯ: ದಿನಾಂಕ.26.11.2025ರಂದು **“ಸಂವಿಧಾನ ದಿನ”**ವನ್ನು ಆಚರಿಸುವ ಬಗ್ಗೆ.

****

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು, ನಿರ್ದೇಶಕರು, ಪ್ರಾಂಶುಪಾಲರು, ಬಟವಾಡೆ ಅಧಿಕಾರಿಗಳು, ಅಧ್ಯಾಪಕರು, ಅಧ್ಯಾಪಕೇತರರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ, **ದಿನಾಂಕ.26.11.2025ರಂದು** ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗ/ಕಛೇರಿಗಳಲ್ಲಿ ಪ್ರತಿ ವರ್ಷದಂತೆ ಪ್ರಸಕ್ತ ವರ್ಷ **“ಸಂವಿಧಾನ ದಿನ”**ವನ್ನು ಆಚರಿಸುವಂತೆ ಹಾಗೂ ಹಿಂಪುಟದಲ್ಲಿರುವ **“ಭಾರತದ ಸಂವಿಧಾನ ಪೀಠಿಕೆ”**ಯನ್ನು ಸಾಮೂಹಿಕವಾಗಿ ಓದುವ ಮೂಲಕ **“ಸಂವಿಧಾನ ದಿನ”**ವನ್ನು ಆಚರಿಸುವಂತೆ ತಿಳಿಸಲಾಗಿದೆ.

ಕುಲಸಚಿವರು 21/11/2025
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಗೆ,

1. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜನಾಧಿಕಾರಿಗಳು ಮತ್ತು ಪ್ರಾಧ್ಯಾಪಕರು.
2. ಹಣಕಾಸು ಆಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
7. ಸಂಯೋಜಕರು, ಐ.ಡಿ.ಸಿ. ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–ಇವರಿಗೆ **ಸದರಿ ಸುತ್ತೋಲೆಯನ್ನು ಮೈಸೂರ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.**
8. ಎಲ್ಲಾ ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿಯವರ/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈ.ವಿ.ವಿ., ಮೈಸೂರು.
10. ಕಛೇರಿ ಪ್ರತಿ.

24/11/25
D/8
24/11/25

सत्यमेव जयते

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1][ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ;
ಸ್ಥಾನಮಾನ ಹಾಗೂ ಅವಕಾಶ ಸಮಾನತೆ

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್-2025: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 20ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 71ನೇ ಸ್ಥಾನ)

## ಮೈಸೂರು ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆ

ಮಾನಸಗಂಗೋತ್ರಿ, ಮೈಸೂರು

**ಡಾ.ಎಂ.ಎಸ್. ಗೋವಿಂದೇ ಗೌಡ**
ಬಿ.ಇ, ಎಂ.ಟೆಕ್(ಐಐಟಿ–ಬಿ), ಪಿ.ಹೆಚ್.ಡಿ(ಐಐಟಿ–ಬಿ)

ಈಮೇಲ್: directormusem@uni-mysore.ac.in


No.MUSE/ Misc /2025-26/ ದಿನಾಂಕ:26.11.2025

ಗೆ:

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಮಾನ್ಯರೆ,

ವಿಷಯ:– ಕಾಲೇಜಿನಲ್ಲಿ ದಿನಾಂಕ 26.11.2025ರಂದು "ಸಂವಿಧಾನ ದಿನ" ವನ್ನು ಆಚರಿಸಿರುವ ಬಗ್ಗೆ.
ಉಲ್ಲೇಖ:– ಪತ್ರ ಸಂಖ್ಯೆ.ಜಿಎಲ್13/107(ಎ)//2022–23, ದಿನಾಂಕ 21.11.2025.

------

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ನಮ್ಮ ತಾಂತ್ರಿಕ ಕಾಲೇಜಿನಲ್ಲಿ ದಿನಾಂಕ 26.11.2025ರಂದು ಬೆಳಿಗ್ಗೆ 11.00 ಗಂಟೆಗೆ ಉಲ್ಲೇಖಿತ ಪತ್ರದ ಹಿಂಪುಟದಲ್ಲಿ ತಿಳಿಸಿರುವಂತೆ **"ಭಾರತದ ಸಂವಿಧಾನ ಪೀಠಿಕೆ"** ಯನ್ನು ಸಾಮೂಹಿಕವಾಗಿ ಓದುವ ಮೂಲಕ **"ಸಂವಿಧಾನ ದಿನ"** ವನ್ನು ಆಚರಿಸಲಾಗಿದ್ದು, ಇದರ ಛಾಯಾಚಿತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ವಂದನೆಗಳೊಡನೆ,

ತಮ್ಮ ನಂಬುಗೆಯ

26/11/25

ನಿರ್ದೇಶಕರು

ನಿರ್ದೇಶಕರು
ಮೈಸೂರು ವಿಶ್ವವಿದ್ಯಾನಿಲಯ ತಾಂತ್ರಿಕ ಕಾಲೇಜು
ಮಾನಸಗಂಗೋತ್ರಿ, ಮೈಸೂರು-06

ಪ್ರತಿ:

1. ಸಂಯೋಜಕರು, ಐ.ಸಿ.ಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಕಛೇರಿ ಪ್ರತಿ.

TCC



Celebration of “**Constitution Day**” on 26th Nov 2025




Celebration of “**Constitution Day**” on $26^{th}$ Nov 2025